ಸಾಕ್ಷಿಗೆ ದಿನಾಂಕಃ 20-01-2025 ರಂದು ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲುಃ ಆರೋಪಿ ಪರ ಶ್ರೀ ಟಿ ಎನ್ ಎಂ ವಕೀಲರಿಂದಃ**

ಆರೋಪಿ ನನಗೆ 7-8 ವರ್ಷಗಳಿಂದ ಪರಿಚಿತ. ಆರೋಪಿ ನೀತಿಗೆರೆ ಗ್ರಾಮದ ವಾಸಿ, ನನ್ನದು ಅರಳೀಕಟ್ಟೆ ಗ್ರಾಮ ಎಂದರೆ ಸರಿ. ನಮ್ಮ ಗ್ರಾಮಕ್ಕೂ ಆರೋಪಿ ಗ್ರಾಮಕ್ಕೂ 10 ಕಿ. ಮೀ ಅಂತರವಿದೆ. ಕಾಕನೂರಿನಲ್ಲಿ ನನಗೆ ಮುರುಗೇಶ ಎಂಬ ಸ್ನೇಹಿತನಿದ್ದಾನೆ ಎಂದರೆ ಸರಿಯಲ್ಲ. ನನಗೂ ಮತ್ತು ಆರೋಪಿ ನಡುವೆ ನಿಪಿ-1ಕ್ಕೂ ಮುನ್ನ ಯಾವುದೇ ಹಣಕಾಸಿನ ವ್ಯವಹಾರ ಇರಲಿಲ್ಲ. ಕಾಕನೂರಿನ ಮುರುಗೇಶ ನನ್ನ ಸ್ನೆಹಿತನಾಗಿದ್ದು ಆರೋಪಿ ಆತನೊಂದಿಗೆ ಹಲವು ವರ್ಷಗಳಿಂದ ಹಣಕಾಸಿನ ವ್ಯವಹಾರ ಮಾಡುತ್ತಿದ್ದ ಎಂದರೆ ಸರಿಯಲ್ಲ. ಆರೋಪಿ ಸದರಿ ಮುರುಗೇಶನಿಂದ ಸಾಲವನ್ನು ಪಡೆದು ಪ್ರತಿ ತಿಂಗಳು ಶೇಃ 2 ರಂತೆ ಬಡ್ಡಿ ಪಾವತಿಸುತ್ತಿದ್ದ ವಿಚಾರ ನನಗೆ ಗೊತ್ತಿದ್ದರು ಸಹ ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಿಪಿ-1ನ್ನು ಆರೋಪಿ ಮುರುಗೇಶನಿಗೆ ತಾನು ಪಡೆದ ಸಾಲಕ್ಕಾಗಿ ಭದ್ರತೆಗಾಗಿ ಕೊಟ್ಟಿದ್ದು ನನ್ನ ಮತ್ತು ಆರೋಪಿಯ ನಡುವೆ ಯಾವುದೇ ವ್ಯವಾಹಾರ ನಿಪಿ-1ರ ವಿಚಾರವಾಗಿ ನಡೆದಿಲ್ಲ ಎಂದರೆ ಸಾಕ್ಷಿ ಸದರಿ ಮುರುಗೇಶ ಯಾರು ಎಂದು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ.

ನಾನು ಆರೋಪಿಗೆ ನಗದು ಹಣವನ್ನು 19-09-2023ರಂದು ಕೊಟ್ಟಿರುತ್ತೇನೆ. ಸದರಿ ಸಮಯಕ್ಕೆ ನನ್ನನ್ನು ಮತ್ತು ಆರೋಪಿಯನ್ನು ಹೊರತುಪಡಿಸಿ ಬೇರೆ ಯಾರು ಇರಲಿಲ್ಲ. ಸದರಿ ಹಣವನ್ನು ಕೇಳಿ ಆರೋಪಿ ನಮ್ಮ ಮನೆಗೆ ಬಂದಿರುತ್ತಾನೆ. ಆರೋಪಿ ನನಗೆ ಸಾಲವನ್ನು ಸದರಿ ದಿನಾಂಕದಂದೇ ಕೇಳಿರುತ್ತಾನೆ. ಆರೋಪಿ ಸದರಿ ಸಾಲವನ್ನು ತನ್ನ ಮನೆಯನ್ನು ಕಟ್ಟುವ ಉದ್ದೇಶಕ್ಕಾಗಿ ಪಡೆದಿರುತ್ತಾನೆ. ಸರಿದ ವಿಚಾರವನ್ನು ನನ್ನ ಪಿರ್ಯಾದಿನಲ್ಲಿ ಮತ್ತು ಮುಖ್ಯ ವಿಚಾರಣಾ ಪ್ರ.ಪತ್ರದಲ್ಲಿ ನಮೂದಿಸಿರುತ್ತೇನೆ. ಆರೋಪಿಗೆ 500 ರೂ. ಮುಖ ಬೆಲೆಯ ನೋಟುಗಳನ್ನು ಕೊಟ್ಟಿರುತ್ತೇನೆ. ಸದರಿ ಹಣ ನನಗೆ ಮೆಕ್ಕೆಜೋಳ ಮಾರಾಟ ಮಾರಿದ್ದರಿಂದ ಬಂದಿರುತ್ತದೆ. ಮೆಕ್ಕೆಜೋಳ ಮಾರಾಟ ಮಾಡಿದ ಕುರಿತು ಯಾವುದಾದರೂ ರಶೀದಿ ಹಾಜರುಪಡಿಸಿದ್ದೀರ ಎಂದರೆ ಸಾಕ್ಷಿ ನಾವು ರೈತರಾಗಿದ್ದು ಕೈ ವ್ಯಾಪಾರ ಮಾಡುತ್ತೇವೆ ಎಂದು ನುಡಿಯುತ್ತಾರೆ. ಸದರಿ ಹಣವನ್ನು ವ್ಯಾಪಾರಸ್ಥರು ನಗದಾಗಿ ನನಗೆ ಕೊಟ್ಟಿರುತ್ತಾರೆ. ಸದರಿ ಮೆಕ್ಕೆಜೋಳದ ವ್ಯಾಪಾರಿಗಳು ಹಾಸನ ಜಿಲ್ಲೆಗೆ ಸೇರಿದವರಾಗಿದ್ದು ನನಗೆ ನಿರ್ದಿಷ್ಟವಾಗಿ ಅವರ

ಹೆಸರನ್ನು ಹೇಳಲಾಗುವುದಿಲ್ಲ. ಸಾಮಾನ್ಯವಾಗಿ ಕೊಂಡು ಕೊಳ್ಳುವ ಸಮಯಕ್ಕೆ ರಶೀದಿಯನ್ನು ವ್ಯಾಪಾರಸ್ಥರು ಕೊಟ್ಟಿರುತ್ತಾರೆ ಎಂದರೆ ಸರಿ. ಸಾಕ್ಷಿ ಮುಂದುವರೆದು ಸದರಿ ಚೀಟಿಯನು ನಾನು ಇಟ್ಟುಕೊಳ್ಳುವ ಅಭ್ಯಾಸವನ್ನು ಬೆಳೆಸಿಕೊಂಡಿಲ್ಲ ಎಂದು ನುಡಿಯುತ್ತಾರೆ. ಸದರಿ ಹಣವನ್ನು ನಾನು ಮಾಹೇಯಾನ ಶೇ 2 ರಂತೆ ಕೊಟ್ಟಿರುತ್ತೇನೆ ಎಂದರೆ ಸಾಕ್ಷಿ ಆರೋಪಿ ಸಾಲವನ್ನು ಕೇಳುವಾಗ ಒಂದು ತಿಂಗಳೊಳಗೆ ಲೋನ್ ಆದ ತಕ್ಷಣ ಮರುಪಾವತಿಸುವುದಾಗಿ ಹೇಳಿದ ಕಾರಣ ನಾನು ಯಾವುದೇ ಬಡ್ಡಿ ವ್ಯವಹಾರ ಮಾತನಾಡಿರುವುದಿಲ್ಲ. ನ್ಯಾಯಾಲಯದಲ್ಲಿ ಹಾಜರುಪಡಿಸಿರುವ ನಿಪಿ-1ರಲ್ಲಿ ಉಲ್ಲೇಖವಿರುವ ಮೊತ್ತಕ್ಕೆ ನಾನು ಬಡ್ಡಿಯನ್ನು ಸೇರಿಸಿ ನಮೂದಿಸಿದ್ದೇನೆ ಎಂದರೆ ಸರಿಯಲ್ಲ.

(ಮುಂದುವರೆದ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದರಿಂದ ಸಮಯಾವಕಾಶ ನೀಡಲಾಯಿತು).

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಪರಿಸಲಾಯಿತು.)**

**ಓ.ಹೇ.ಕೇ. ಸರಿ ಇದೆ.**

**02ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು**
**ಮತ್ತು ಜೆಎಂಎಫ್ ಸಿ, ಚನ್ನಗಿರಿ.**